

# ಪಿಂಕ್ ವಾಟ್ಸ್‌ಆ್ಯಪ್ ತಂಟೆಗೆ ಬಂದೀರಿ ಜೋಕೆ!

ತಂತ್ರಜ್ಞಾನ ದುರ್ಬಳಕೆ ಮಾಡಿಕೊಳ್ಳುತ್ತಿರುವ ಸೈಬರ್ ಖದೀಮರು 'ಪಿಂಕ್ ವಾಟ್ಸ್‌ಆ್ಯಪ್' ಸೃಷ್ಟಿಸಿ, ಅದರ ಮೂಲಕ ಬಳಕೆದಾರರನ್ನು ವಂಚನೆಯ ಜಾಲಕ್ಕೆ ಸೆಳೆಯುತ್ತಿದ್ದಾರೆ. ಆ ಮೂಲಕ, 'ನನ್ನ ತಂಟೆಗೆ ಬಂದೀರಿ, ಜೋಕೆ' ಎನ್ನುವ ಪರೋಕ್ಷ ಎಚ್ಚರಿಕೆ ನೀಡುತ್ತಿದೆ.

■ **ಶಶಿಕುಮಾರ್ ಸಿ.**

ತಿಳಿ ಹಸುರು ಬಣ್ಣದ ವಾಟ್ಸ್‌ಆ್ಯಪ್ ಎಂದರೆ ಬಹುತೇಕರಿಗೆ ಅಚ್ಚುಮೆಚ್ಚು. ಆದರೆ ಪಿಂಕ್ ಬಣ್ಣದ ವಾಟ್ಸ್‌ಆ್ಯಪ್ ಅಂದರೆ...? ಸದ್ಯದ ಮಟ್ಟಿಗೆ ಸ್ಮಾರ್ಟ್‌ಫೋನ್ ಬಳಕೆದಾರರೆಲ್ಲರೂ ಭಯಪಡುವ ಸಂದರ್ಭ ಎದುರಾಗಿದೆ. ಪಿಂಕ್ ವಾಟ್ಸ್‌ಆ್ಯಪ್ ಎಂಬ ನಕಲಿ ಆ್ಯಪ್ ಸೃಷ್ಟಿಸಿರುವ ಸೈಬರ್ ಖದೀಮರು, ಅದರ ಮೂಲಕ ಜನರ ವೈಯಕ್ತಿಕ ಮಾಹಿತಿ, ಬ್ಯಾಂಕಿಂಗ್ ಮಾಹಿತಿಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ.

ವಂಚನೆಗೆ ಕಾದು ಕುಳಿತಿರುವ 'ಪಿಂಕ್ ವಾಟ್ಸ್‌ಆ್ಯಪ್' ಸಾಮಾಜಿಕ ಜಾಲತಾಣಗಳ ಮೂಲಕ ವೈರಸ್ ಒಳಗೊಂಡ ಲಿಂಕ್ ಹರಡುತ್ತಿದ್ದು, ಅದನ್ನು ಕ್ಲಿಕ್ಕಿಸಿದರೆ ಅಥವಾ ಪಿಂಕ್ ವಾಟ್ಸ್‌ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡರೆ ಸೈಬರ್ ವಂಚನೆಯ ಜಾಲಕ್ಕೆ ರತ್ನಗಂಬಳಿ ಹಾಸಿದಂತಾಗುತ್ತದೆ.

ಒಮ್ಮೆ ಲಿಂಕ್ ಕ್ಲಿಕ್ಕಿಸಿದರೆ ಬಳಕೆದಾರರ ವೈಯಕ್ತಿಕ ಮಾಹಿತಿ, ನೆಟ್ ಬ್ಯಾಂಕ್ ಮಾಹಿತಿ, ಯುಪಿಐ ಮಾಹಿತಿ ಸೇರಿದಂತೆ ಡಿಜಿಟಲ್ ಪಾವತಿಯ ಎಲ್ಲ ಮಾಹಿತಿಯನ್ನು ಕದಿಯುವ ಖದೀಮರು, ಕ್ಷಣಾರ್ಧದಲ್ಲಿ ಬಳಕೆದಾರರ ಬ್ಯಾಂಕ್ ಖಾತೆಯಲ್ಲಿನ ಹಣವನ್ನು ಎಗರಿಸುತ್ತಿದ್ದಾರೆ. ಅಲ್ಲದೆ, ವೈಯಕ್ತಿಕ ಮಾಹಿತಿಯನ್ನಿಟ್ಟುಕೊಂಡು ಬಳಕೆದಾರರನ್ನು ಬ್ಲಾಕ್‌ಮೇಲ್ ಮಾಡಲಾಗುತ್ತದೆ.

## ಏನಿದು ಪಿಂಕ್ ವಾಟ್ಸ್‌ಆ್ಯಪ್

ವಾಟ್ಸ್‌ಆ್ಯಪ್ ಮಾದರಿಯದ್ದೇ ಮಾಲ್‌ವೇರ್ ಒಳಗೊಂಡ ಆ್ಯಪ್. ವಾಟ್ಸ್‌ಆ್ಯಪ್ ತಿಳಿ ಹಸುರು ಬಣ್ಣದಲ್ಲಿದ್ದರೆ ಇದು ಪಿಂಕ್ ಬಣ್ಣದಲ್ಲಿರುತ್ತದೆ. ಈ ಆ್ಯಪ್‌ಗೆ ಸಂಬಂಧಿಸಿದ ಲಿಂಕ್ ಹರಡಿರುವ ಹ್ಯಾಕರ್‌ಗಳು ಅದನ್ನು ಕ್ಲಿಕ್ಕಿಸಿದವರ ಬ್ಯಾಂಕ್ ಖಾತೆಗೆ ಏಕಾಏಕಿ ಕನ್ನ ಹಾಕುತ್ತಾರೆ.

'ಈ ಲಿಂಕ್ ಕ್ಲಿಕ್ ಮಾಡಿದರೆ ಹೊಸ ವಾಟ್ಸ್‌ಆ್ಯಪ್ ಅಪ್‌ಡೇಟ್‌ಗಳು ನಿಮಗೆ ದೊರಕುತ್ತವೆ. ಲೋಗೊದ ಬಣ್ಣ ಬದಲಾಗುವುದಲ್ಲದೆ ಹಲವು ಫೀಚರ್‌ಗಳು ದೊರಕುತ್ತವೆ' ಎಂದು ಬಳಕೆದಾರರನ್ನು ನಂಬಿಸಿ ಲಿಂಕ್ ಕ್ಲಿಕ್ಕಿಸುವಂತೆ ಮತ್ತು ಪಿಂಕ್ ವಾಟ್ಸ್‌ಆ್ಯಪ್ ಇನ್‌ಸ್ಟಾಲ್ ಮಾಡುವಂತೆ ಪುಸಲಾಯಿಸಲಾಗುತ್ತದೆ.



## ಲಿಂಕ್ ಕ್ಲಿಕ್ಕಿಸಿದರೆ?

- ಸ್ಪ್ಯಾಮ್ ಮೆಸೇಜ್‌ಗಳನ್ನು ಕಳುಹಿಸಿ ಬ್ಯಾಂಕಿನಿಂದ, ಗೂಗಲ್ ಪೇ, ಫೋನ್ ಪೇಯಿಂದ ಹಣ ಕದಿಯಬಹುದು.
- ಯೂಸರ್ ನೇಮ್ ಮತ್ತು ಪಾಸ್‌ವರ್ಡ್ ಬಳಸಿ ಮಾಹಿತಿ ದುರ್ಬಳಕೆ ಸಾಧ್ಯವಿದೆ.
- ಸಹಿಯ ದುರುಪಯೋಗವಾಗಬಹುದು.
- ಸಂಪರ್ಕ ಸಂಖ್ಯೆಗಳನ್ನು ಕದಿಯಬಹುದು. ಇದನ್ನು ದುರುದ್ದೇಶಗಳಿಗೆ ಅಥವಾ ಮಾರ್ಕೆಟಿಂಗ್ ಉದ್ದೇಶಗಳಿಗೆ ಮಾರಿಕೊಳ್ಳಬಹುದು.
- ಗ್ಯಾಲರಿಯಲ್ಲಿರುವ ಫೋಟೊಗಳನ್ನು ಕದ್ದು ಕೆಟ್ಟ ಉದ್ದೇಶಗಳಿಗೆ ಬಳಸಬಹುದು.
- ಮೊಬೈಲ್ ಮೇಲೆ ಬಳಕೆದಾರರಿಗೇ ನಿಯಂತ್ರಣ ಇಲ್ಲದಂತೆ ಮಾಡಬಹುದು.

## ಸುರಕ್ಷಿತವಾಗಿರುವುದು ಹೇಗೆ?

- ಮೊದಲನೆಯದಾಗಿ, ನಕಲಿ ಅಪ್ಲಿಕೇಷನ್‌ಗಳ ಬಗ್ಗೆ ಎಚ್ಚರಿಕೆ ವಹಿಸುವುದು.
- ಮೊಬೈಲ್‌ನಲ್ಲಿ ಪಿಂಕ್ ವಾಟ್ಸ್‌ಆ್ಯಪ್ ಡೌನ್‌ಲೋಡ್ ಮಾಡಿದ್ದರೆ, ತಕ್ಷಣವೇ ಅದನ್ನು ಅನ್‌ಇನ್‌ಸ್ಟಾಲ್ ಮಾಡಿ.
- ಹೋಂಸ್ಕ್ರೀನ್‌ನಿಂದ ಡಿಲೀಟ್ ಮಾಡಿದ ತಕ್ಷಣ ಅದು ಫೋನ್‌ನಿಂದ ಕೂಡಲೇ ಹೋಗುವುದಿಲ್ಲ. ಪೂರ್ತಿಯಾಗಿ ಅಳಿಸಬೇಕಿದ್ದರೆ, ಸೆಟ್ಟಿಂಗ್ಸ್‌ಗೆ ಹೋಗಿ ಆ್ಯಪ್ಸ್ ಎಂಬ ಆಯ್ಕೆಯನ್ನು ಕ್ಲಿಕ್ಕಿಸಿದರೆ ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಆಗಿರುವ ಎಲ್ಲ ಆ್ಯಪ್‌ಗಳ ಪಟ್ಟಿ ತೆರೆದುಕೊಳ್ಳುತ್ತದೆ. ಆ ಪೈಕಿ ಪಿಂಕ್ ವಾಟ್ಸ್‌ಆ್ಯಪ್ ಲೋಗೊ ಇರುವೆಡೆ ಕ್ಲಿಕ್ ಮಾಡಿ, ಅನ್ ಇನ್‌ಸ್ಟಾಲ್ ಬಟನ್ ಒತ್ತಬೇಕು.
- ಗೂಗಲ್ ಪ್ಲೇ ಸ್ಟೋರ್, ಐಒಎಸ್ ಆ್ಯಪ್ ಸ್ಟೋರ್‌ನಿಂದ ಮಾತ್ರ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ವೆರಿಫೈಡ್ ಆ್ಯಪ್‌ಗಳನ್ನಷ್ಟೇ ಡೌನ್‌ಲೋಡ್ ಮಾಡಿಕೊಳ್ಳಬೇಕು.
- ಅಪರಿಚಿತ ಮೂಲಗಳಿಂದ ಸ್ವೀಕರಿಸಿದ ಲಿಂಕ್‌ಗಳ ದೃಢೀಕರಣವನ್ನು ಪರಿಶೀಲಿಸದ ಹೊರತು ಅವುಗಳ ಮೇಲೆ ಕ್ಲಿಕ್ ಮಾಡಬಾರದು.
- ಸರಿಯಾದ ದೃಢೀಕರಣ ಅಥವಾ ಪರಿಶೀಲನೆ ಇಲ್ಲದೆ ಇತರರಿಗೆ ಯಾವುದೇ ಲಿಂಕ್‌ಗಳು ಅಥವಾ ಸಂದೇಶಗಳನ್ನು ಫಾರ್ವರ್ಡ್ ಮಾಡಬಾರದು.
- ಲಾಗಿನ್ ರುಜುವಾತುಗಳು, ಪಾಸ್‌ವರ್ಡ್‌ಗಳು, ಕ್ರೆಡಿಟ್ ಅಥವಾ ಡೆಬಿಟ್ ಕಾರ್ಡ್ ವಿವರಗಳು ಮತ್ತು ಅದೇ ರೀತಿಯ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಯಾರೊಂದಿಗೂ ಹಂಚಿಕೊಳ್ಳಬಾರದು. ■